ಕನ್ನಡ ಪರ ಸಂಘಟನೆಗಳ ಘೋಷಣೆ

ಶಾಶ್ವತ ನೀರಾವರಿಗಾಗಿ ಜೂ.12 ರ ಕರ್ನಾಟಕ ಬಂದ್‌ಗೆ ಬೆಂಬಲ

ತುಮಕೂರು

ಅವಿಭಜಿತ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಸೇರಿದಂತೆ ಬಯಲುಸೀಮೆ ಜಿಲ್ಲೆಗಳಲ್ಲಿ ತಲೆದೋರಿರುವ ನೀರಿನ ಸಮಸ್ಯೆ ನಿವಾರಣೆಗಾಗಿ ಶಾಶ್ವತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಜೂನ್ 12 ರಂದು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ತುಮಕೂರು ನಗರ ಹಾಗೂ ತುಮಕೂರು ಜಿಲ್ಲೆಯಲ್ಲಿ ಸಂಪೂರ್ಣ ಬೆಂಬಲ ನೀಡಲಾಗುತ್ತಿದೆ ಎಂದು ಕನ್ನಡ ಪರ ಸಂಘಟನೆಗಳ ಜಿಲ್ಲಾ ಅಧ್ಯಕ್ಷ ಧನಿಯಾ ಕುಮಾರ್ ಪ್ರಕಟಿಸಿದರು.

ಶನಿವಾರ ಬೆಳಗ್ಗೆ ತುಮಕೂರು ನಗರದಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 12 ರಂದು ಮುಂಜಾನೆ 6 ರಿಂದ ಸಂಜೆ 6 ಗಂಟೆಯವರೆಗೆ ತುಮಕೂರು ಜಿಲ್ಲಾದ್ಯಂತ ಬಂದ್ ಆಚರಿಸಲಾಗುವುದು. ಶಾಲಾ ಕಾಲೇಜುಗಳು, ಕಛೇರಿ- ಕಾರ್ಖಾನೆಗಳು, ಚಿತ್ರ ಮಂದಿರಗಳು, ಅಂಗಡಿ-ಮುಂಗಟ್ಟುಗಳು, ಹೋಟೆಲ್‌ಗಳು ಇತ್ಯಾದಿ ಸಂಪೂರ್ಣ ಬಂದ್ ಆಗಲಿವೆ. ಕನ್ನಡಪರ, ರೈತಪರ, ದಲಿತಪರ ಸಂಘಟನೆಗಳೆಲ್ಲವೂ ಸಂಯುಕ್ತವಾಗಿ ಬಂದ್ ಅನ್ನು ಬೆಂಬಲಿಸುತ್ತಿವೆ. ಜಿಲ್ಲೆಯಲ್ಲಿ ಬಂದ್ ಯಶಸ್ವಿ ಆಗಲಿದೆ ಎಂದರು.

ಬಂದ್ ಮಾಡಲೇಬೇಕಾದ ಸ್ಥಿತಿ

ಚಿಕ್ಕಬಳ್ಳಾಪುರದ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ ಅವರು ಮಾತನಾಡಿ, ನೀರಾವರಿ ಯೋಜನೆ ಜಾರಿಗಾಗಿ ಒತ್ತಾಯಿಸಿ ಬಂದ್ ಮಾಡಬೇಕಾದ ಪರಿಸ್ಥಿತಿ ತಲೆದೋರಿದೆಯೆಂದು ವಿಷಾದದಿಂದ ಉದ್ಗರಿಸಿದರು. ಜಾತ್ಯತೀತವಾಗಿ, ಪಕ್ಷಾತೀತವಾಗಿ ನೊಂದ ರೈತಾಪಿಗಳು, ನೊಂದ ಜನರು ನೀರಿಗಾಗಿ ನಡೆಸುತ್ತಿರುವ ಹೋರಾಟ ಇದಾಗಿದೆ ಎಂದರು. ಇಂತಹ ಹೋರಾಟಗಳಿಂದ ನೀರಾವರಿ ಯೋಜನೆಗಳ ಸತ್ಯಾಸತ್ಯತೆ ಏನೆಂಬುದು ಬೆಳಕಿಗೆ ಬರಲಿದೆ ಎಂದೂ ಅಭಿಪ್ರಾಯಪಟ್ಟರು.

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳ ಜನರು ನೀರಾವರಿ ಯೋಜನೆಗಳಿಲ್ಲದೆ, ಅಂತರ್ಜಲ ಸಂಪತ್ತೂ ಇಲ್ಲದೆ ದಶಕಗಳಿಂದ ಬಸವಳಿದಿದ್ದಾರೆ. ರಾಜಕಾರಣಿಗಳಲ್ಲಿ ಇಚ್ಛಾಶಕ್ತಿ ಇಲ್ಲದಿರುವುದರಿಂದ ನೀರಾವರಿಗೆ ಸಂಬಂಧಿಸಿದ ಭರವಸೆಗಳೆಲ್ಲವೂ ಹುಸಿಯಾಗುತ್ತಿದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಜೊತೆಗೆ ಬೇರೆ ಬೇರೆ ಮೂಲಗಳಿಂದ ದೊರಕಬಹುದಾದ ಪರ್ಯಾಯ ನೀರಿನ ಲಭ್ಯತೆಗಳ ಬಗ್ಗೆ ಅಧ್ಯಯನ ನಡೆಸಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಬರಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಕಲ್ಪಿಸುವ ಬಗ್ಗೆ ವರದಿ ಸಲ್ಲಿಸಲು ತಜ್ಞರ ಸಮಿತಿ ರಚಿಸುವ ಬಗ್ಗೆ 2016 ರ ಮಾರ್ಚ್ 6 ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದಿತ್ತಾದರೂ, ಈವರೆಗೆ ಯಾವುದೇ ಪ್ರಗತಿ ಆಗಿಲ್ಲ. ಇವೆಲ್ಲವುಗಳಿಂದ ಬೇಸತ್ತು ಈಗ ಬಂದ್ ಆಚರಿಸುವ ಪರಿಸ್ಥಿತಿ ಬಂದಿದೆ ಎಂದು ಹೇಳಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್. ರೇವಣ್ಣ , ಕರ್ನಾಟಕ ರಕ್ಷಣಾ ವೇದಿಕೆಯ ರಘುರಾಮ್ ಜೂನ್ 12 ರ ಬಂದ್‌ಗೆ ಬೆಂಬಲಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಚಿಕ್ಕಬಳ್ಳಾಪುರ ನೀರಾವರಿ ಹೋರಾಟ ಸಮಿತಿ ಉಪಾಧ್ಯಕ್ಷ ಮಳ್ಳೂರು ಹರೀಶ್, ಕೋಲಾರ ಸಮಿತಿಯ ಅಧ್ಯಕ್ಷ ಕುರುಬರ ಪೇಟೆ ವೆಂಕಟೇಶ್, ಉಪಾಧ್ಯಕ್ಷ ಅಹಿಂದ ಮಂಜುನಾಥ್, ಸಂಚಾಲಕ ಬಿನ್ನಿ ಶ್ರೀನಿವಾಸ್, ಕನ್ನಡ ಸೇನೆಯ ನಟರಾಜ್, ಚಂದ್ರಕಾಂತ್ ಸೂರ್ಯವಂಶಿ, ತುಮಕೂರಿನ ಪಿ.ಎನ್. ರಾಮಯ್ಯ, ನಾಗೇಶ್, ಪ್ರಸನ್ನ ಮೊದಲಾದ ಮುಖಂಡರುಗಳು ಉಪಸ್ಥಿತರಿದ್ದರು.

ಇಂದಿನಿಂದ ಶ್ರೀ ಮೈಲಾರ ಲಿಂಗೇಶ್ವರಸ್ವಾಮಿ ಜಾತ್ರಾ ಮಹೋತ್ಸವ

ತುಮಕೂರು

ಹಾಲು ಮತದ ವಂಶಸ್ಥರಾದ ಬಸವೇಗೋತ್ರದ ಕೆಂಗೂರಿ ಕುರುಬ ಜನಾಂಗದ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿ, ಗಂಗಮಾಳಮ್ಮ ದೇವಿ ಹಾಗೂ ರಾಜಗಿರಿ ದೈವತೋತ್ರದ ಕುರುಬ ವಂಶಸ್ಥರ ಶ್ರೀ ಧರ್ಮಮ್ಮ ಏಳು ಮಂದಿ ಅಮ್ಮನವರ ಮತ್ತು ಶ್ರೀ ಸಿದ್ದೇಶ್ವರಸ್ವಾಮಿಯವರ ಜಾತ್ರಾ ಮಹೋತ್ಸವವು ಇಂದಿನಿಂದ ಜೂನ್ 15ರವರೆಗೆ ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿಯಲ್ಲಿ ಜರುಗಲಿದೆ.

ಜೂ.12 ರ ಸೋಮವಾರ ಬೆಳಗ್ಗೆ 9.30ಕ್ಕೆ ನಡೆಯಲಿರುವ ಧಾರ್ಮಿಕ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರು ಪೀಠ, ಹೊಸದುರ್ಗ ಶಾಖೆಯ ಶ್ರೀ ಈಶ್ವರಾನಂದಪುರಿ ಮಹಾಸ್ವಾಮಿಗಳು, ತಿಂತಿನಿ ಗುಲ್ಬರ್ಗ ಶಾಖೆಯ ಶ್ರೀ ಸಿದ್ಧರಾಮನಂದಪುರಿ ಮಹಾಸ್ವಾಮಿಗಳು, ಹಿರೇಮೈಲಾರ, ಹೂವಿನ ಹಡಗಲಿ, ಬಳ್ಳಾರಿ ಜಿಲ್ಲೆಯ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್ ಸ್ವಾಮಿಗಳು ವಹಿಸುವರು.

ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ಸಂಸದ ಎಸ್.ಪಿ.ಮುದ್ದಹನುಮೇಗೌಡ ಅವರುಗಳು ನೆರವೇರಿಸುವರು. ಅಧ್ಯಕ್ಷತೆಯನ್ನು ಶಾಸಕ ಕೆ.ಎನ್. ರಾಜಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಚ್.ಎಂ.ರೇವಣ್ಣ, ವಿ.ಪ. ವಿರೋಧ ಪಕ್ಷದ ನಾಯಕ ಕೆ.ಎಸ್.ಈಶ್ವರಪ್ಪ, ಶಾಸಕ ವರ್ತೂರ್ ಪ್ರಕಾಶ್, ಮಾಜಿ ಸಚಿವರಾದ ಎಚ್.ವಿಶ್ವನಾಥ್, ಬಂಡೆಪ್ಪಕಾಶಂಪೂರ್, ಶಾಸಕ ಬೈರತಿ ಬಸವರಾಜು, ಶಾಸಕ ಎಂ.ಟಿ.ಬಿ. ನಾಗರಾಜು, ವಿ.ಪ. ಸದಸ್ಯ ಬೈರತಿ ಸುರೇಶ್, ಶಾಸಕರಾದ ಬಿ.ಜೆ. ಗೋವಿಂದಪ್ಪ, ಸುರೇಶ್‌ಬಾಬು, ಮಾಜಿ ಸಚಿವ ಆರ್.ಕೃಷ್ಣಪ್ಪ, ದೇವರಾಜು ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷ ಹುಚ್ಚಪ್ಪ, ಮಾಜಿ. ವಿ.ಪ. ಸದಸ್ಯ ಡಾ.ಎಂ.ಆರ್.ಹುಲಿನಾಯ್ಕರ್, ಶಾಸಕರಾದ ಕೆ.ತಿಪ್ಪೇಸ್ವಾಮಿ, ಪಾರ್ಥಸಾರಥಿ, ಜಿ.ಪಂ.ಅಧ್ಯಕ್ಷೆ ಲತಾ ರವಿಕುಮಾರ್, ಮಾಜಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಿವಮೂರ್ತಿ, ಪ್ರಜಾಪ್ರಗತಿ ಪತ್ರಿಕೆ ಸಂಪಾದಕ ಎಸ್.ನಾಗಣ್ಣ, ಮಧುಗಿರಿ ತಾ.ಕುರುಬರ ಸಂಘದ ಅಧ್ಯಕ್ಷ ಲಿಂಗಪ್ಪ ಸೇರಿದಂತೆ ಮತ್ತಿತರ ಗಣ್ಯರು, ಸಮಾಜದ ಮುಖಂಡರು ಉಪಸ್ಥಿತರಿರುವರು.

ಜೂನ್ 11ರ ಭಾನುವಾರ ರಾತ್ರಿ ಬೆಂಗಳೂರಿನ ಜಯಭಾರತಿ ಕಲಾಸಂಘದ ವತಿಯಿಂದ ಭಕ್ತ ಕನಕದಾಸ ಐತಿಹಾಸಿಕ ನಾಟಕ ಪ್ರದರ್ಶನಗೊಳ್ಳಲಿದೆ.

ಅಲಂಕಾರ್ ಜ್ಯೂಯಲರ್ಸ್
ದಿ|| ಎಂ.ಎಸ್.ವೀರಭದ್ರಶೆಟ್ಟಿ ರವರಿಂದ
ಸಂತೃಪ್ತಿ ಕಾಂಪ್ಲೆಕ್ಸ್, ವಿವೇಕಾನಂದ(ಶಿರಾನಿ) ರಸ್ತೆ,
ತುಮಕೂರು, ದೂ : 2278458
ಸತತ 57 ವರ್ಷಗಳಿಂದ ಗ್ರಾಹಕರ ನಂಬಿಕೆಗೆ ಪಾತ್ರವಾಗಿದೆ.
ಅತ್ಯಾಧುನಿಕ ಸೌಲಭ್ಯಗಳುಳ್ಳ, ಹವಾನಿಯಂತ್ರಣವುಳ್ಳ, ಸುಸಜ್ಜಿತವಾದ ಮಳಿಗೆ
ಮಂಡಿಪೇಟೆಯಿಂದ ನೂತನ ವಿಳಾಸಕ್ಕೆ ಸ್ಥಳಾಂತರಗೊಂಡಿದೆ.

ಕುಂಚಿಟಿಗರ ಒಕ್ಕಲಿಗರ ವಿದ್ಯಾಭಿವೃದ್ಧಿ ಸಂಘ(ರಿ)
ಕೋತಿತೋಪು, ತುಮಕೂರು.
ಪ್ರಕಟಣೆ
ಮೇಲ್ಕಂಡ ಸಂಘದ ಎಲ್ಲಾ ಮತದಾರರಿಗೂ ತಿಳಿಯಪಡಿಸುವುದೇನೆಂದರೆ ತಾ|| 11-06-2017ರ ಭಾನುವಾರ ನಡೆಯಬೇಕಾಗಿದ್ದ "ಆಡಳಿತ ಮಂಡಳಿ ನಿರ್ದೇಶಕರ" ಆಯ್ಕೆಯು ಎಲ್ಲಾ 25 ಸ್ಥಾನಗಳಿಗೂ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುವುದರಿಂದ ಈದಿನ ಮತದಾನ ನಡೆಯುವುದಲ್ಲವೆಂದು ಈ ಮೂಲಕ ತಿಳಿಲಾಗಿದೆ.
ಸಹಿ/-ಪ್ರೊ ಚಂದ್ರಣ್ಣ
ಮುಖ್ಯ ಚುನಾವಣಾಧಿಕಾರಿಗಳು

ಕೊಳದಪ್ಪಲೇಶ್ವರ ದೇವಸ್ಥಾನದ ಹುಂಡಿಗೆ ಕನ್ನ

ಶಿರಾ

ಇಲ್ಲಿನ ಐತಿಹಾಸಿಕ ಪ್ರಸಿದ್ಧ ಶ್ರೀ ಕೊಳದಪ್ಪಲೇಶ್ವರಸ್ವಾಮಿ ದೇವಸ್ಥಾನದ ಹುಂಡಿಯನ್ನು ಹಾಡ ಹಗಲಲ್ಲಿಯೇ ಕಳ್ಳರು ಕಳವು ಮಾಡಿ ಹಣ ದೋಚಿದ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ.

ಶನಿವಾರ ಮಧ್ಯಾನ್ಹ 2 ಗಂಟೆಯ ಸಮಯದಲ್ಲಿ ದೇವಸ್ಥಾನದ ಬಳಿ ಯಾರೂ ಇಲ್ಲ ಅನ್ನುವುದನ್ನು ಖಾತರಿಪಡಿಸಿಕೊಂಡ ಕಳ್ಳರು ದೇವಸ್ಥಾನದ ಮುಖ್ಯದ್ವಾರದ ಬಾಗಿಲಿನ ಬೀಗ ಮುರಿದು ಒಳ ನುಗ್ಗಿ ಒಂದು ಹುಂಡಿಯನ್ನು ಒಡೆದು ಅದರಲ್ಲಿದ್ದ ಹಣವನ್ನು ಕದ್ದು ಪರಾರಿಯಾಗಿದ್ದಾರೆ.

ಸುಮಾರು 5,000ಕ್ಕೂ ಹೆಚ್ಚು ಹಣ ಕಳವು ಮಾಡಿರಬಹುದೆಂಬ ಅನುಮಾನವಿದ್ದು ಹುಂಡಿಯನ್ನು ದೇವಸ್ಥಾನದ ಸಮೀಪದಲ್ಲಿಯೇ ಎಸೆದು ಹೋಗಿದ್ದಾರೆ. ಕಳೆದ ಕೆಲವು ವರ್ಷಗಳಿಂದಲೂ ಇದೇ ದೇವಸ್ಥಾನದಲ್ಲಿ ವರ್ಷಕ್ಕೆ ಎರಡು ಬಾರಿ ಹುಂಡಿಯ ಕಳ್ಳತನವಾಗುತ್ತಿದ್ದು ಹುಂಡಿಯ ಹಣದ ರುಚಿ ಕಂಡ ಅದೇ ಕಳ್ಳರೇ ಪದೇ ಪದೇ ಕಳವು ಮಾಡುತ್ತಿರಬಹುದೆಂದು ಶಂಕಿಸಲಾಗಿದೆ. ಈ ಸಂಬಂಧ ನಗರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ತುಮಕೂರು ಜಿಲ್ಲೆಗೆ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾಗಿ ಹೆಚ್.ಡಿ. ಆನಂದ್‌ಕುಮಾರ್ ಶನಿವಾರದಂದು ಅಧಿಕಾರ ಸ್ವೀಕರಿಸಿದರು. ಡಿ.ವೈ.ಎಸ್.ಪಿ. ಕೆ.ಎಸ್. ನಾಗರಾಜು ಹೂಗುಚ್ಛನೀಡಿ ಅಭಿನಂದಿಸಿದರು.

ಅನ್ಯ ಭಾಷೆಗೆ ಅಡ್ಡಿಯಿಲ್ಲ, ಕನ್ನಡ ಕಡ್ಡಾಯ: ಸಿದ್ದು

ಬೆಂಗಳೂರು

ಆಯಾ ಮಾತೃಭಾಷೆಗಳ ಜೊತೆಗೆ ನಾಡಿನ ಭಾಷೆ ಕನ್ನಡವನ್ನು ಎಲ್ಲ ಮಕ್ಕಳು ಕಲಿಯಬೇಕು. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಶಾಲೆಗಳಲ್ಲಿ ಕನ್ನಡ ಭಾಷಾ ಕಲಿಕೆಯನ್ನು ಕಡ್ಡಾಯಗೊಳಿಸಿ ಸರ್ಕಾರ ಆದೇಶಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಉರ್ದು ಸೇರಿದಂತೆ ರಾಜ್ಯದಲ್ಲಿರುವ ವಿವಿಧ ಭಾಷೆಯ ಶಾಲೆಗಳಿಗೆ ಕನ್ನಡ ಅಧ್ಯಾಪಕರನ್ನು ಸರ್ಕಾರ ನೇಮಿಸಲು ನಿರ್ಧರಿಸಿದೆ. ರಾಜ್ಯದಲ್ಲಿರುವ ಎಲ್ಲರೂ ಕನ್ನಡವನ್ನು ಕಲಿಯಬೇಕು ಎಂದು ಹೇಳಿದರು.

ಶಿವಾಜಿನಗರದಲ್ಲಿ ಐ ಮಾನಿಟರಿ ಅಡ್ವೈಸರಿ ಕೌನ್ಸಿಲ್ ಸಂಸ್ಥೆ 16 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕವಾಗಿ ನಿರ್ಮಿಸಿರುವ ವಿಕೆ ಒಬೇದುಲ್ಲಾ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಉದ್ಘಾಟಿಸಿ ಮಾತನಾಡಿದ ಅವರು, ಇಂಗ್ಲಿಷ್, ತಮಿಳು ಸೇರಿದಂತೆ ಯಾವುದೇ ಭಾಷೆಯನ್ನು ಕಲಿಯಲು ಸರ್ಕಾರ ಅಡ್ಡಿಪಡಿಸುವುದಿಲ್ಲ, ಆದರೆ, ಕನ್ನಡ ಕಲಿಯುವುದು ಕಡ್ಡಾಯ ಎಂದು ಹೇಳಿದರು.

ನಮ್ಮದು ಜಾತ್ಯತೀತ ಸಮಾಜ, ಎಲ್ಲ ಜಾತಿ, ಧರ್ಮ, ಭಾಷೆಯ ಜನರನ್ನು ಸಮಾನವಾಗಿ ನೋಡುವುದು ಸರ್ಕಾರದ ಧ್ಯೇಯ. ಈ ನಿಟ್ಟಿನಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೆಲಸ ಮಾಡುತ್ತಿದೆ. ಶಿವಾಜಿನಗರ ಸರ್ಕಾರಿ ಶಾಲೆಯಲ್ಲಿ ಮುಂದಿನ ದಿನಗಳಲ್ಲಿ ಕನ್ನಡ ಮಾಧ್ಯಮ ಕಲಿಕೆಗೂ ಹೆಚ್ಚಿನ ಒತ್ತು ನೀಡುವ ಅಗತ್ಯವಿದೆ ಎಂದರು.

ಸರ್ಕಾರಿ ಶಾಲೆಗಳು ಹಾಗೂ ಕೆರೆ-ಕುಂಟೆಗಳನ್ನು ಒತ್ತುವರಿ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಐಎಂಎ ಅಧ್ಯಕ್ಷ ಮೊಹ್ಮದ್ ಮನ್ಸೂರ್ ಖಾನ್ ಶಾಲೆಯನ್ನು ದತ್ತು ಪಡೆದು ಅತ್ಯಾಧುನಿಕವಾಗಿ ನಿರ್ಮಾಣ ಮಾಡುತ್ತಿರುವುದು ಶ್ಲಾಘನೀಯ. ಇದೇ ರೀತಿ ಹಲವು ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ ಎಂದು ಸಲಹೆ ಮಾಡಿದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ತನ್ವೀರ್ ಸೇಠ್ ಮಾತನಾಡಿ, ಒಂದೇ ಸ್ಥಳದಲ್ಲಿ 1 ರಿಂದ 12ನೇ ತರಗತಿವರೆಗೆ ಕಲಿಕೆಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ರಾಜ್ಯಾದ್ಯಂತ 176 ಕ್ಯಾಂಪಸ್‌ಗಳನ್ನು ಗುರುತಿಸಲಾಗಿದೆ ಎಂದು ಹೇಳಿದ ಅವರು, 200 ಮೌಲಾನ ಆಜಾದ್ ಶಾಲೆಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಅಲ್ಪಸಂಖ್ಯಾತ ಸಮುದಾಯಕ್ಕಾಗಿ ಈ ಹಿಂದೆ ನೀಡುತ್ತಿದ್ದ 265 ಕೋಟಿ ರೂ. ಅನುದಾನವನ್ನು 2750 ಕೋಟಿ ರೂ.ಗೆ ಹೆಚ್ಚಿಸಿದ್ದಾರೆ. ಇದರಿಂದ 14 ಲಕ್ಷ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ ಎಂದರು. ನಗರಾಭಿವೃದ್ಧಿ ಸಚಿವ ರೋಷನ್‌ಬೇಗ್, ಮುಖ್ಯಮಂತ್ರಿ ಸಿದ್ದರಾಮಯ್ಯ ಹಜ್ ಭವನಕ್ಕೆ 40 ಕೋಟಿ ರೂ. ನೀಡಿದ್ದಾರೆ. ಬಡ ಜನರ ಮಕ್ಕಳು ಶಿಕ್ಷಣ ಕಲಿತು ಉನ್ನತ ಸ್ಥಾನಕ್ಕೇರುವಂತೆ ಮನವಿ ಮಾಡಿದರು.

ಸಮಾರಂಭದಲ್ಲಿ ಐಎಂಎ ಅಧ್ಯಕ್ಷ ಮೊಹ್ಮದ್ ಮನ್ಸೂರ್ ಖಾನ್, ವಿಧಾನ ಪರಿಷತ್ ಸದಸ್ಯ ಎಚ್.ಎಂ. ರೇವಣ್ಣ, ಪಾಲಿಕೆ ಸದಸ್ಯರಾದ ಗುಣಶೇಖರ್, ಶಕೀಲ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತೆ ಸೌಜನ್ಯ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಪ್ಯಾನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಆಧಾರ್ ಕಡ್ಡಾಯ

ನವದೆಹಲಿ: ಜುಲೈ 1ರಿಂದ ಪ್ಯಾನ್ ಕಾರ್ಡ್‌ಗೆ ಅರ್ಜಿ ಮತ್ತು ಆದಾಯ ತೆರಿಗೆ ಲೆಕ್ಕಪತ್ರ ಮಾಹಿತಿ (ಐಟಿಆರ್) ಸಲ್ಲಿಸಲು ಆಧಾರ್ ಸಂಖ್ಯೆ ಕಡ್ಡಾಯ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಶನಿವಾರ ಹೇಳಿದೆ. ಆಧಾರ್ ಕಡ್ಡಾಯಗೊಳಿಸುವ ಕಾನೂನಿನ ಸಿಂಧುತ್ವವನ್ನು ಸುಪ್ರೀಂಕೋರ್ಟ್ ಶುಕ್ರವಾರ ಎತ್ತಿಹಿಡಿದಿತ್ತು. ಆದರೆ, ಆಧಾರ್ ಸಂಖ್ಯೆ ಹೊಂದಿಲ್ಲದವರಿಗೆ ಇದರಿಂದ ತಾತ್ಕಾಲಿಕ ವಿನಾಯಿತಿಯನ್ನು ಸುಪ್ರೀಂಕೋರ್ಟ್ ನೀಡಿತ್ತು.ಆದರೆ, ಸಿಬಿಡಿಟಿ ಮಾರ್ಗಸೂಚಿಯ ಪ್ರಕಾರ ಜುಲೈ 1ರಿಂದ ಪ್ಯಾನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಮತ್ತು ಆದಾಯ ತೆರಿಗೆ ಲೆಕ್ಕಪತ್ರ ಮಾಹಿತಿ (ಐಟಿಆರ್) ಸಲ್ಲಿಸಲು ಆಧಾರ್ ಸಂಖ್ಯೆ ಕಡ್ಡಾಯವಾಗಲಿದೆ. ಇದರಿಂದಾಗಿ ಆಧಾರ್ ಸಂಖ್ಯೆ ಹೊಂದಿಲ್ಲದವರು ಪ್ಯಾನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಮತ್ತು ಆದಾಯ ತೆರಿಗೆ ಲೆಕ್ಕಪತ್ರ ಮಾಹಿತಿ ಸಲ್ಲಿಸಲು ಜೂನ್ 30 ಕೊನೆ ದಿನ.

SHUBHA YATRA HOLIDAYS
HO : Sri Ranga Arcade, 3rd flr, 8th Mile,
Opp to B'lore Pattidar Samaj,
Next to Ramachandra hospital, B'lore - 57
Branches: Mysore, Tumkur, Hassan, Kolar, Shimogga
5 ಜ್ಯೋತಿರ್ಲಿಂಗ ಹಾಗೂ ಶಿರಡಿ ದರ್ಶನ
ಕೂಡಲಸಂಗಮ
ಬಿಜಾಪುರ
ಪಂಡರಾಪುರ
ತುಳಜಾಪುರ್
ಪರ್ಲಿ ವೈಜ್ಯನಾಥ್(ಜ್ಯೋ)
ಔರಂಗಾಬಾದ್
ಎಲ್ಲೋರ ಕೇವ್ಸ್
ಗೃಷ್ಣೇಶ್ವರ್ (ಜ್ಯೋ)
ಶನಿಸಿಂಗನಾಪುರ
ಶಿರಡಿ
ನಾಸಿಕ್(12 ಸ್ಥಳಗಳು)
ತ್ರಯಂಬಕೇಶ್ವರ(ಜ್ಯೋ)
ಭೀಮಾಶಂಕರ್(ಜ್ಯೋ)
ಔಂದನಾಗನಾಥ್ (ಜ್ಯೋ)
ನಾರಾಯಣ್‌ಪುರ್
ಕೊಲ್ಲಾಪುರ
ಸಾವದತ್ತಿ
6 ದಿನಗಳು ಹಾಗೂ 5 ರಾತ್ರಿಗಳು ವಿಶೇಷ ಯಾತ್ರೆ
ತಮಿಳುನಾಡು ವಿಶೇಷ ಪ್ರವಾಸಗಳು
ತಿರುಚಿ ಶ್ರೀರಂಗಂ
ತಂಜಾವೂರ್
ಪಿಲ್ಲಾಯಾರು ಪಟ್ಟಿ
ರಾಮೇಶ್ವರಂ
ತಿರುಚಂದೂರು
ಕನ್ಯಾಕುಮಾರಿ
ಸುಚೀಂದ್ರಮ್
ಮದುರೈ
ಕೊಡೈಕೆನಾಲ್
ಪಲನಿ
4 ದಿನಗಳು ಹಾಗೂ 3 ರಾತ್ರಿಗಳು ವಿಶೇಷ ಯಾತ್ರೆ
* ಉಪಹಾರ/ಮಧ್ಯಾಹ್ನದ ಊಟ/ರಾತ್ರಿಯ ಊಟ(ಬಿಸಿಯಾದ ಶುಚಿಯಾದ ಅಡುಗೆ)
*ಎ / ಸಿ ಲಕ್ಷುರಿ ಬಸ್ಸು   * ಶುಚಿಯಾದ ಕೊಠಡಿಗಳು
ಅಂಡಮಾನ್ / ಬ್ಯಾಂಕಾಕ್ / ಶ್ರೀಲಂಕ   * ಕೇರಳ ವಿಶೇಷ ಪ್ರವಾಸ
9741607877

ಜೂಜು: ನಾಲ್ವರ ಸೆರೆ

ಮಿಡಿಗೇಶಿ

ಜೂಜಾಟದಲ್ಲಿ ತೊಡಗಿದ್ದ ನಾಲ್ಕು ಮಂದಿಯನ್ನು ಬಂಧಿಸಿರುವ ಬಡವನಹಳ್ಳಿ ಪೊಲೀಸರು ಅವರಿಂದ 5,620 ರೂಗಳನ್ನು ವಶಪಡಿಸಿಕೊಂಡಿದ್ದಾರೆ. ನೇರಳೆಕೆರೆ ಶಾಲಾ ಪಕ್ಕದಲ್ಲಿ ಬೆಳಿಗ್ಗೆ ಜೂಜಾಟ ನಡೆಯುತ್ತಿದ್ದಾಗ ಪೊಲೀಸರು ದಾಳಿ ನಡೆಸಿದ್ದರು. ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಮರಗಳನ್ನು ಸ್ಪರ್ಶಿಸಿ, ಧ್ಯಾನಿಸಿದ ಜೈನ ಮುನಿ

ತೋವಿನಕೆರೆ

ಹಣ್ಣಿನ ಫಲಗಳು ಮತ್ತು ನೆರಳನ್ನು ನೀಡಿ ಪ್ರಾಣಿ ಪಕ್ಷಿಗಳನ್ನು ಕಾಪಾಡುವಂತೆ ಮರಗಳ ಕೆಳಗೆ ಧ್ಯಾನ ಮಾಡಿ ಜೈನ ಮುನಿಗಳು ಸ್ಥಳೀಯ ಜನರ ಗಮನ ಸೆಳೆದರು.

ಪಾದಯಾತ್ರೆ ಮೂಲಕ ತುಮಕೂರಿಗೆ ಶುಕ್ರವಾರ ಆಗಮಿಸಿದ ಜೈನ ಮುನಿಗಳಾದ ಆಚಾರ್ಯ ಪುಷ್ಪದಂತ ಸಾಗರ್ ಜೀ ಮಹಾರಾಜ್, ಪ್ರಮುಖ ಸಾಗರಜೀ ಮಹಾರಾಜ್ ಮತ್ತು ಪೂಜ್ಯ ಸಾಗರ ಜೀ ಮಹಾರಾಜ್ ದಾರಿಯಲ್ಲಿ ಕಂಡು ಬಂದ ಫಲ ನೀಡುವ ಮರಗಳ ಕೆಳಗೆ ಕುಳಿತು ಕೆಲವು ನಿಮಿಷಗಳ ಕಾಲ ಧ್ಯಾನ ಮಾಡುತ್ತಿದ್ದರು.

ಹಲಸಿನ ಮರದ ಬುಡದಲ್ಲಿ ಕಾಯಿಗಳನ್ನು ಕಂಡ ಕೂಡಲೇ ಹತ್ತಿರ ಹೋಗಿ ಸ್ಪರ್ಶಿಸಿ, ಅಪ್ಪಿಕೊಂಡು ಕೆಲವು ಸೆಕೆಂಡುಗಳ ಕಾಲ ಕಣ್ಣು ಮುಚ್ಚಿಕೊಂಡು ನಿಲ್ಲುತ್ತಿದ್ದರು. ಪ್ರತಿಯೊಂದು ಮರಗಳ ಕೆಳಗೆ ಕುಳಿತುಕೊಂಡು ಕಣ್ಣುಮುಚ್ಚಿ ಕೆಲವು ನಿಮಿಷಗಳ ಕಾಲ ಧ್ಯಾನ ಮಾಡುವುದು ದಾರಿಯ ಉದ್ದಕ್ಕೂ ಕಂಡು ಬರುತಿತ್ತು.

ಪಾದಯಾತ್ರೆ ಮಾಡುವ ಸಂದರ್ಭದಲ್ಲಿ ದಾರಿಯಲ್ಲಿ ಕಾಣುತ್ತಿದ್ದ ಹಲಸು ನೇರಳೆ, ಸೀತಾಫಲ, ಸೀಬೆ ಸೇರಿದಂತೆ ಹಣ್ಣು ಕೊಡುವ, ನೆರಳು ನಿಡುವ ಮರಗಳಾದ ಹೊಂಗೆ, ಆಲ, ಅರಳಿ ಗಿಡ ಮರಗಳು, ಕೃಷಿ ಕೆಲಸ ಮಾಡುತ್ತಿದ್ದ ಸ್ಥಳಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದುಕೊಂಡು ತಮಗೆ ಗೊತ್ತಿರುವುದನ್ನು ತಿಳಿಸುತ್ತಿದ್ದರು.

ಮರದ ಕೆಳಗೆ ಕುಳಿತುಕೊಂಡು ಧ್ಯಾನ ಮಾಡಿ ಹೆಚ್ಚು ಫಲ ಹಾಗೂ ನೆರಳನ್ನು ನೀಡಿ ಕಾಡು ಪ್ರಾಣಿಗಳ, ಪಕ್ಷಿಗಳ ಜೀವನಕ್ಕೆ ಆಧಾರವಾಗುವಂತೆ ಬೇಡುತ್ತಿದ್ದರು ಎನ್ನುತ್ತಾರೆ ಕಳೆದ 20 ದಿನಗಳಿಂದ ಪಾದಯಾತ್ರೆಯಲ್ಲಿ ಭಾಗವಹಿಸಿರುವ ತುಮಕೂರಿನ ಪಚ್ಚೇಶ್.

ಬೆವಿಕಂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿ.
BESCOM
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ಕಛೇರಿ
ಗ್ರಾಮೀಣ ಉಪ ವಿಭಾಗ-1, ಬೆ.ವಿ.ಕಂ. ತುಮಕೂರು.
ವಿದ್ಯುತ್ ವ್ಯತ್ಯಯ
ದಿನಾಂಕ: 11-06-2017 ರಿಂದ 14-06-2017 ರವರೆಗೆ. ಬೆಳಿಗ್ಗೆ 10ಗಂಟೆಯಿಂದ ಸಂಜೆ 6 ಗಂಟೆಯವರೆಗೆ, ದೊಡ್ಡೇರಿ ಲಿಂಕ್‌ಲೈನ್ ಕಾಮಗಾರಿ ಪ್ರಗತಿಯಲ್ಲಿರುವುದರಿಂದ, ಬೆಳ್ಳಾವಿ ಉಪಕೇಂದ್ರದಿಂದ ಹೊರಹೊಮ್ಮುವ F10, ಮಷಣಪುರ ಫಿಡರ್ ಮತ್ತು F09, ಸುಗುಣ ಫಿಡರ್, ವಿದ್ಯುತ್ ವ್ಯತ್ಯಯ ಕಡಿತಗೊಳಿಸಲಾಗಿದೆ, ವಿದ್ಯುತ್ ಗ್ರಾಹಕರು ಸಹಕರಿಸಬೇಕಾಗಿ ವಿನಂತಿಸಲಾಗಿದೆ.
ಸಹಿ/- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಗ್ರಾಮೀಣ ಉಪ ವಿಭಾಗ-1, ಬೆ.ವಿ.ಕಂ. ತುಮಕೂರು.

ಓದಿರಿ ಪ್ರಜಾಪ್ರಗತಿ
ವೀಕ್ಷಿಸಿ ಪ್ರಗತಿ ಟಿವಿ

Aster CMI HOSPITAL
BANGALORE
Aster@30
Three decades of compassionate care
ಪೀಡಿಯಾಟ್ರಿಕ್ ನ್ಯೂರಾಲಜಿ, ಇಮ್ಯೂನಾಲಜಿ ಮತ್ತು ಕಾರ್ಡಿಯಾಕ್ ಕ್ಲಿನಿಕ್
ಡಾ. ರವಿ ಕುಮಾರ್ ಸಿ.ಪಿ.
MRCPCH, CCT in Paediatrics (U.K.)
Fellow in Paediatric Epilepsy (London)
Fellow in Paediatric Neurology (London)
Consultant Paediatric Neurologist
ಡಾ. ಸಾಗರ್ ಭಟ್ಟಾಡ್
MBBS, MD (PGI), DM Paediatric
Clinical Immunology & Rheumatology (PGI)
Consultant - Paediatric Immunology and Rheumatology
ದಿನಾಂಕ : 13ನೇ ಜೂನ್, 2017 (ಮಂಗಳವಾರ)
1) ಸ್ಥಳ : ಸಿದ್ಧರಾಮಣ್ಣ ಆಸ್ಪತ್ರೆ, ಗಾಂಧಿನಗರ, ತುಮಕೂರು.
ಸಮಯ : ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ
Tel: +91 816-2275557, +91 816-2270278, 9945190006
2) ಸ್ಥಳ : ಮಡಿಲು ಆಸ್ಪತ್ರೆ, ತುಮಕೂರು.
ಸಮಯ : ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ
Tel.: +91 816-2277755, +91 816-2277733, 9945190006
ಈ ಕೆಳಗಿನ ಕಾಯಿಲೆಗಳಿಂದ ನರಳುತ್ತಿರುವವರು :
ನ್ಯೂರಾಲಜಿ : ಅಪಸ್ಮಾರ, ತಲೆನೋವು, ಅಭಿವೃದ್ಧಿ ವಿಳಂಬ, ಮಾತನಾಡುವುದು ವಿಳಂಬ, ಸೆರೆಬ್ರಲ್ ಪಾಲ್ಸಿ, ಹುಟ್ಟಿನಿಂದಲೇ ತೊಂದರೆಗಳೊಂದಿಗೆ ಜನಿಸಿದ ಮಕ್ಕಳು ಕ್ಲಿನಿಕ್‌ಗೆ ಭೇಟಿಕೊಡಬಹುದು.
ಇಮ್ಯೂನಾಲಜಿ : ಕಿವಿ ಸೋರುವಿಕೆ, ಎದೆ ಸೋಂಕು, ಅತಿಸಾರ, ಚರ್ಮದ ಸೋಂಕು, ಬಾವು ರಚನೆ ಇರುವ ಮಕ್ಕಳು ಕ್ಲಿನಿಕ್‌ಗೆ ಭೇಟಿಕೊಡಬಹುದು.
ಕಾರ್ಡಿಯಾಕ್ ಕ್ಲಿನಿಕ್
ಡಾ. ಪ್ರದೀಪ್ ಕುಮಾರ್
MBBS, MD, DM
Consultant - Interventional Cardiology
3) ಸ್ಥಳ : ಟಿ.ಹೆಚ್.ಎಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಮಾರುತಿ ಥಿಯೇಟರ್ ಹತ್ತಿರ, ಗುಬ್ಬಿ ಗೇಟ್, ಬಿಹೆಚ್ ರಸ್ತೆ ತುಮಕೂರು-572101
ದಿನಾಂಕ : 13ನೇ ಜೂನ್, 2017 (ಮಂಗಳವಾರ)
ಸಮಯ : ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ
ಕಾರ್ಡಿಯಾಕ್: ಹೃದಯ ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ಸಮಸ್ಯೆಗಳಿರುವವರೂ ಕ್ಲಿನಿಕ್‌ಗೆ ಭೇಟಿಕೊಡಬಹುದು.
ಭೇಟಿಗಾಗಿ ಕರೆಮಾಡಿ: 99009 00080 / 99451 90006

ಕಲಾವಿದ ವೀರೇಶ್ ನಿಧನ

ಗುಬ್ಬಿ

ಜಾನಪದ ಕಲೆಗಳಲ್ಲಿ ಒಂದಾದ ಲಿಂಗದವೀರರ ಕುಣಿತ ಕಲೆಯಲ್ಲಿ ಪ್ರಖ್ಯಾತಿ ಪಡೆದಿದ್ದ ಪತ್ತೆಮತ್ತಿಘಟ್ಟದ ವೀರೇಶ್(38) ಅನಾರೋಗ್ಯದಿಂದ ನಿಧನರಾಗಿದ್ದಾರೆ.

ತಾಲ್ಲೂಕಿನ ಪತ್ರೆಮತ್ತಿಘಟ್ಟದ ವೀರೇಶ್ ಕಳೆದ ಹಲವು ವರ್ಷಗಳಿಂದಲೂ ಲಿಂಗದ ವೀರರ ಕಲೆಯನ್ನು ಕಲೆಯನ್ನು ಮೈಗೂಡಿಸಿಕೊಂಡು ಜಿಲ್ಲೆಯಲ್ಲಿ ಮಾತ್ರವಲ್ಲದೆ, ರಾಜ್ಯ ಮಟ್ಟದಲ್ಲಿ ಮನೆ ಮಾತಾಗಿದ್ದರು. ಇವರ ವಂಶಸ್ಥರು ಸುಮಾರು 50 ದಶಕಗಳಿಂದ ಲಿಂಗದ ಬೀರರ ಕುಣಿತ ಕಲೆಗೆ ಪ್ರಖ್ಯಾತಿಯನ್ನು ಪಡೆದಿದ್ದರು. ರಾಜ್ಯದಲ್ಲಿ ನಡೆಯುವ ದಸರಾ, ಗಣೇಶೋತ್ಸವ ಕಾರ್ಯಕ್ರಮಗಳು ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದರು. ಕಳೆದ 6 ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಬೆಂಗಳೂರಿನ ಆಸ್ಪತ್ರೆಯಲ್ಲಿ ಕಳೆದ ರಾತ್ರಿ ನಿಧನರಾಗಿದ್ದಾರೆ.

Chethana Vidya Mandira, Batawadi, Tumkur,
Fifth Batch Class from 15-06-2017
ಸರ್ವೋದಯ ಶಿಕ್ಷಣ ಸಂಸ್ಥೆ ರಿ, ತುಮಕೂರು
ಹಾಗೂ ಬಾಷ್ ಕಂಪನಿಯ ಸಹಯೋಗದಲ್ಲಿ
3 ತಿಂಗಳ ತರಬೇತಿ ಹಾಗೂ ಉದ್ಯೋಗಾವಕಾಶ
ವಯೋಮಿತಿ 18 ರಿಂದ 25 ವರ್ಷಗಳು
ವಿದ್ಯಾರ್ಹತೆ : SSLC (Pass), PUC, I.T.I (Pass / Fail)
Spoken English, Computer Basics,
Interview Skills, Industry Specific Skills,
Personality Development module and many more
Learning kit and Training Course certificate from BOSCH.
HIGHLIGTS OF THE PROGRAMME.
·Highly qualified and experienced faculty.
·Fuly equipped Computer Lab,
·Wordsworth English Lab with LCD Projection Auditorium.
For Enquiry Call : 8867110304

SARANG INSTITUTE OF POLYTECHNIC
No Donation
Opp. Indian Oil Petrol Bunk, Kunigal Road, Gulur, Tumkuru.
Approved By AICTE New Delhi, Affiliated to DTE.
DIPLOMA ADMISSIONS OPEN FOR 2017-18
3 Year's Courses offered : (Eligibility 10th Pass)
Mechanical / Civil / Electrical & Electronics Engg
Facilities : Good infrastructure, Experienced Staff
Well Equipped Laboratories And Placement Assistance
0816-2246115/9845386678/7892813176

PUBLISHED AND OWNED BY S NAGANNA , PUBLISHED AT NO. 1 pragathi , B H Road Tumkur 572102. PRINTED BY SHILPASHREE OFFSET PRINTER at PRAGATHI Building BH Road Tumkur -572102 POST REG NO . L-2/RNP- 364/TMR/2015-17 RNI NO KAR KAN /1988/2925 EDITOR: S NAGANNA

10.06.2017.indd 3   6/10/2017 11:28:34 PM